ಹೀಗಾಗಿ ಬೇಸಿಗೆಯಲ್ಲಿ ಎಷ್ಟೇ ಬೆವರಿರಲಿ, ಅದನ್ನೆಲ್ಲ ಬಟ್ಟೆಯೇ ಕುಡಿದು ಜೀನ್ಸ್ ಬಟ್ಟೆಯಿಂದ ಆಗುತ್ತಿದ್ದ ಕಿರಿಕಿರಿಯನ್ನು ತಪ್ಪಿಸುತ್ತದೆ ಎಂದು ಭರವಸೆ ನೀಡುತ್ತಾರೆ.

ಸೀತಾಮಾತೆಗಾಗಿ ಹನುಮಂತ ಬಾಳೆಯ ನಾರಿನಿಂದ ಸೀರೆಯನ್ನು ನೇಯ್ದು ಕೊಟ್ಟನೆಂಬ ರಾಮಾಯಣದ ಕತೆ ಈ ಬಟ್ಟೆ ತಯಾರಿಸಲು ನಮಗೆ ಪ್ರೇರಕವಾಯಿತು ಎನ್ನುತ್ತಾರೆ ಇಲ್ಲಿರುವ ನೇಕಾರರು. ಈ ಬಟ್ಟೆ ಬಾಳಿಕೆ ಬರುವುದಿಲ್ಲವೆಂಬ ಭಯವೇ ಬೇಡ, ತುಂಬ ದೃಢವಾಗಿದೆ ಎಂಬ ಭರವಸೆ ಕೊಡುತ್ತಾರೆ. ಕೈಯಿಂದ ಮಾಡುವ ತಯಾರಿಕೆ, ಯಂತ್ರಗಳ ಬಳಕೆ ಇಲ್ಲವಾದ ಕಾರಣ ತುಂಬ ಶ್ರಮವಿದೆ. ಬಾಳೆಯಿಂದ ನೂಲಿನಂತಹ ಎಳೆಗಳನ್ನು ತೆಗೆದು ಒಣಗಿಸಿ, ಸಮಪಾಲು ಹತ್ತಿಯ ನೂಲು ಬೆರೆಸಿ ಜೀನ್ಸ್ ತಯಾರಿಸಲಾಗುತ್ತದೆ. ಒಂದು ಜೋಡಿ ಪ್ಯಾಂಟ್ ತಯಾರಿಸಲು 180 ಗ್ರಾಂ ಬಾಳೆನಾರು ಬೇಕಾಗುತ್ತದೆ. ಒಂದು ಬಾಳೆಯಲ್ಲಿ ಒಂದು ಜೋಡಿಗೆ ಬೇಕಾಗುವಷ್ಟು ನಾರು ಸಿಗುವುದಂತೆ. ಜೋಡಿ ಜೀನ್ಸ್ ಐದು ಸಾವಿರ ರೂಪಾಯಿಗೆ ಮಾರಾಟವಾಗುತ್ತದೆ.

ತೊಂಭತ್ತು ಮಂದಿ ನೇಕಾರರು ಈಗ ಬಾಳೆನಾರಿನಿಂದ ಬಟ್ಟೆ ತಯಾರಿಸಿ ಪ್ಯಾಂಟು ಮತ್ತು ಸ್ಕರ್ಟ್ ಹೊಲಿಯುತ್ತಾರೆ. ಲೋಹದ ಬದಲಾಗಿ ಗುಂಡಿಗಳಿಗೆ ತೆಂಗಿನ ಚಿಪ್ಪುಗಳನ್ನು ಬಳಸುತ್ತಾರೆ. ಸೆಕೆಗಾಲಕ್ಕೆ ಬಾಳೆನಾರಿನ ಕುಪ್ಪಸ ಧರಿಸಿದರೆ ಒಳಗೆ ಚೆನ್ನಾಗಿ ಗಾಳಿಯಾಡಿ ತಂಪಾಗಿರುತ್ತದಂತೆ. ಇದಲ್ಲದೆ ಬಾಳೆನಾರಿನಿಂದ ಸೀರೆ ಸೇರಿದಂತೆ 25 ಬಗೆಯ ಬಟ್ಟೆಗಳೂ ಸಿದ್ಧವಾಗುತ್ತಿವೆ. 2011ರಲ್ಲಿ ಇದೇ ನೇಕಾರರ ಇನ್ನೊಂದು ಸಾಧನೆ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾಗಿದೆ. ಅರಿಶಿನ, ಬೇವು, ತುಳಸಿ, ಶ್ರೀಗಂಧ ಮುಂತಾದ ಗಿಡಮೂಲಿಕೆ(ಪುಡವಾಯಿ)ಗಳು, ಮಸಾಲೆ ಸಸ್ಯಗಳಿಂದ ವೈರಾಣು ನಿರೋಧಕ ಬಟ್ಟೆಗಳನ್ನು ತಯಾರಿಸಿ ಫ್ಯಾಷನ್ ಕ್ರಾಂತಿಯ ದಾಖಲೆ ಮಾಡಿದ್ದಾರೆ. ವಸ್ತ್ರಗಳ ಬಣ್ಣಕ್ಕೆ ಅರಶಿನ, ಕಾಫಿ ಮತ್ತು ದಾಸವಾಳದಂತಹ ನೈಸರ್ಗಿಕ ವಸ್ತುಗಳನ್ನು ಬಳಸಿದ್ದಾರೆ.

### ಬಾಳೆನಾರಿನ ಸ್ಯಾನಿಟರಿ ಪ್ಯಾಡ್

ಬಾಳೆನಾರಿನ ಕತೆ ಇಲ್ಲಿಗೇ ಮುಗಿಯುವುದಿಲ್ಲ. ಕ್ರಿಸ್ಟಿನ್ ಕಾಗಸ್ತು, ಅಮೃತ ಸೈಗಲ್ ಮತ್ತು ಗ್ರೇಸ್ ಕೇನ್ ಎಂಐಟಿಯಲ್ಲಿ ತಾಂತ್ರಿಕ ವಿದ್ಯಾಭ್ಯಾಸದ ಸಹಪಾಠಿಗಳು. ಅವರು ಬಾಳೆನಾರಿನಿಂದ ಸ್ಯಾನಿಟರಿ ಪ್ಯಾಡ್ ತಯಾರಿಸಿ ಕೈಗೆಟಕುವ ಬೆಲೆಗೆ ನೀಡುವ ಸಂಶೋಧನೆ ಮಾಡಿದ್ದಾರೆ. ಸೋಷಿಯಲ್ ಎಂಟರ್‌ಪ್ರೈಸಸ್ ವಿಭಾಗದಲ್ಲಿ ಇದಕ್ಕಾಗಿ ಅವರಿಗೆ ₹ 50 ಸಾವಿರ ರೂ.ಗಳ ಬಹುಮಾನ ಬಂದಿದೆ. ಜಾರ್ಖಂಡ್ ರಾಜ್ಯದಲ್ಲಿ ಸುಸ್ಥಿರ ಮುಟ್ಟಿನ ನಿರ್ವಹಣೆಗಾಗಿ ಇಂತಹ ಒಂದು ದಶಲಕ್ಷ ಪ್ಯಾಡುಗಳನ್ನು ವಿತರಿಸಿದ್ದಾರೆ. ನೈಸರ್ಗಿಕವಾದ ಹಣ್ಣುಗಳು, ಬಿದಿರು ಮತ್ತು ಅಲೊವೆರಾದಿಂದ ಸೀರೆ ತಯಾರಿಸುವುದು ಸಾಧ್ಯವೆಂದು ಅವರು ತೋರಿಸಿಕೊಟ್ಟಿದ್ದಾರೆ. ಬಾಳೆನಾರಿನ ಬಳಕೆ ವ್ಯಾಪಕವಾದರೆ ರೈತರಿಗೂ ಅದರಿಂದ ಆದಾಯ ಬರುತ್ತದೆ.

2014ರಲ್ಲಿ ಕಪೊಕ್ ಮರದ ನಾರಿನಿಂದ ಅನಕ ಪುಥೂರಿನ ನೇಕಾರರು ಬಟ್ಟೆಗಳನ್ನು ತಯಾರಿಸಿದ್ದರು. ಬಾಳೆನಾರಿನ ಬಟ್ಟೆ ತಯಾರಿಕೆಯ ಕಲೆಯಲ್ಲಿ ತರಬೇತಿ ನೀಡಲು ಅಂಡಮಾನ್ ನಿಕೋಬಾರ್ ದ್ವೀಪಗಳಿಗೆ ಅಧಿಕಾರಿಗಳು ಇಲ್ಲಿಂದ ನೇಕಾರರನ್ನು ಕರೆಸಿಕೊಂಡಿದ್ದಾರೆ. ಹೆಚ್ಚು ನೀರನ್ನು ಹೀರಿಕೊಂಡು ದೇಹವನ್ನು ತಂಪಾಗಿಸುವ ಬಾಳೆನಾರಿನ ಬಟ್ಟೆಗಳು ಆಧುನಿಕ ಗ್ರಾಹಕರನ್ನು ಮೆಚ್ಚಿಸುವಂತಾಗಿದೆ.

■



# ಟ್ರೆಂಡಿ ಉಡುಗೆ ಕಾಲವಯ್ಯಾ...

ಹಬ್ಬ ಇರಲಿ ಇಲ್ಲದಿರಲಿ, ಫ್ಯಾಷನ್‌ಪ್ರಿಯರಿಗೆ ಟ್ರೆಂಡಿ ಉಡುಪು ತೊಡುವುದು ಒಂದು ಕ್ರೇಜ್. ಇದಕ್ಕಾಗಿಯೇ ಬಂದಿದೆ ಟ್ರಾನ್ಸಫರೆಂಟ್ ಸಲ್ವಾರ್. ಇದು ಸಾಂಪ್ರದಾಯಿಕ–ಆಧುನಿಕ ಎರಡೂ ಮನೋಭಾವದವರಿಗೂ ಸಲ್ಲುವುದಲ್ಲದೆ ಸಖತ್ ಲುಕ್ ಕೊಡುತ್ತದೆ. ಪಾರದರ್ಶಕ ಸಲ್ವಾರ್ ಮಾತ್ರವಲ್ಲ, ಕುರ್ತಿ, ಬ್ಲೌಸ್, ಸೀರೆ ಎಲ್ಲವೂ ಲಭ್ಯವಿದ್ದು, ವೈವಿಧ್ಯಮಯ ವಿನ್ಯಾಸಗಳಲ್ಲೂ ಸಿಗುತ್ತದೆ.

ಹಬ್ಬದ ಸಂದರ್ಭದಲ್ಲಿ ಸಾಮಾನ್ಯವಾಗಿ ಕಡುಬಣ್ಣದ ಉಡುಗೆಗೇ ಪ್ರಾಶಸ್ತ್ಯ. ಅದರಲ್ಲೂ ಗೋಲ್ಡ್ ಪ್ರಿಂಟ್ ಮೇಲೆ ಬ್ರೈಟ್ ಕಲರ್ ಉಡುಪು ಟ್ರೆಡಿಷನ್ ಅನ್ನು ಇಂದಿನ ಟ್ರೆಂಡ್ ಜತೆಗೆ ಬ್ಲೆಂಡ್ ಮಾಡಿ ಹೊಸ ವಿನ್ಯಾಸದಂತೆಯೇ ಕಂಗೊಳಿಸುತ್ತದೆ.

''ಮೊದಲೆಲ್ಲಾ ಸಲ್ವಾರ್‌ನಲ್ಲೇ ಹಲವು ಬಣ್ಣ, ವಿನ್ಯಾಸ, ಆಕಾರದ ಸೀಮಿತ ವೈವಿಧ್ಯಗಳ ಉಡುಪುಗಳಿದ್ದವು. ಆದರೆ ಈಗ ಫ್ಯಾಷನ್ ಜಗತ್ತು ಸಾಕಷ್ಟು ವಿಸ್ತಾರವಾಗಿದೆ. ಹೊಸ ಹೊಳಹುಗಳನ್ನು ಒಡಲಲ್ಲಿ ತುಂಬಿಕೊಂಡು ಕಣ್ಣಿಗೊಪ್ಪುವ, ಮನಸ್ಸಿಗೊಪ್ಪುವ ವಿನ್ಯಾಸಗಳ ಉಡುಗೆಗಳ ಮಹಾಪೂರವೇ ಮಾರುಕಟ್ಟೆಗೆ ಹರಿದುಬರುತ್ತಿದೆ. ಪಾಶ್ಚಾತ್ಯ ಮಾದರಿಯ ಉಡುಗೆಗಳೂ ದೇಸಿ ಫ್ಯಾಷನ್ ಜತೆಗೆ ಸೇರಿಕೊಂಡು 'ಮಿಕ್ಸ್ ಅಂಡ್ ಮ್ಯಾಚ್' ಮಾಡಿಕೊಳ್ಳಲೂ ಸಾಧ್ಯವಾಗುತ್ತಿದೆ'' ಎನ್ನುತ್ತಾರೆ ಬೆಂಗಳೂರಿನ ಜಯನಗರದಲ್ಲಿರುವ ವಸ್ತ್ರ ವಿನ್ಯಾಸಕಿ ಶೋಭಾ ಮೂರ್ತಿ.

'ಇಂಥ ಹೊಸ ಮಾದರಿಯ ಉಡುಗೆಗಳು ಪಾರ್ಟಿಗಳಿಗೆ, ಗೆಟ್ ಟುಗೆದರ್‌ಗಳಿಗೆ ಸೂಕ್ತವಾಗುವಂತಿರಬೇಕು. ಪ್ರಸ್ತುತ ಫ್ಯಾಷನ್ ಟ್ರೆಂಡ್ ಅನ್ನೂ ಮರೆಯದೆ, ಗ್ರಾಹಕರ ಮನದಾಳಕ್ಕೆ ಸ್ಪಂದಿಸಿದರೆ ಉಡುಪು ವರ್ತಕ ಗೆದ್ದಂತೆಯೇ. ಈ ನಿಟ್ಟಿನಲ್ಲಿ ವಸ್ತ್ರ ವಿನ್ಯಾಸಕರು ಹಲವು ಆಯಾಮಗಳಿಂದ ಯೋಚಿಸಬೇಕಾಗುತ್ತದೆ' ಎನ್ನುತ್ತಾರೆ ಶೋಭಾ.



### ಆಯ್ಕೆ ಹೀಗಿರಲಿ...

- ಧರಿಸಲು ಆರಾಮವೆನಿಸುವ, ಹಾಕಿಕೊಂಡವರಿಗೂ, ನೋಡುವವರಿಗೂ ಮುಜುಗರವಾಗದಂತಹ ಉಡುಗೆ ಖರೀದಿಸಿ.
- ಸೀಸನ್‌ಗೆ (ಆಯಾ ಕಾಲಗಳಿಗೆ) ತಕ್ಕಂಥ ಉಡುಪು ಧರಿಸಿ. ಬೇಸಿಗೆಗೆ ಕೂಲ್ ಆಗಿರುವಂಥ ಹತ್ತಿ, ಖಾದಿ ಉಡುಪು ಸೂಕ್ತ.
- ಚಳಿಗಾಲಕ್ಕೆ ವುಲನ್, ಸಿಂಥೆಟಿಕ್ ಉಡುಗೆ ಧರಿಸಬಹುದು.
- ಆದಷ್ಟು ಫಿಟ್‌ನೆಸ್‌ಗೆ ಆದ್ಯತೆ ಕೊಡಿ. ದೇಹದ ಆಕಾರದ ಬಗ್ಗೆ ಕಾಳಜಿ ವಹಿಸಿದರೆ ಯಾವ ಫ್ಯಾಷನ್ ಉಡುಪುಗಳೂ ಚೆನ್ನಾಗಿ ಕಾಣಿಸುತ್ತವೆ.

■ ಯು.ಎ.